## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **774**

ಸದಸ್ಯರ ಹೆಸರು ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ **21.02.2024**

ಉತ್ತರಿಸುವ ಸಚಿವರು ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಭೂ ಸುಧಾರಣಾ ಕಾಯ್ದೆ ಅನುಷ್ಠಾನಗೊಂಡು ನಾಲ್ಕು ದಶಕವಾಗಿದ್ದರೂ, ಭೂ ವ್ಯಾಜ್ಯಗಳ ಇತ್ಯರ್ಥವಾಗದಿರುವ ಉದ್ದೇಶದಿಂದ ಸ್ಥಾಪನೆಯಾಗಿರುವ ಭೂ ನ್ಯಾಯ ಮಂಡಳಿ ಮುಂದೆ ಇನ್ನೂ ಲಕ್ಷಾಂತರ ಪ್ರಕರಣಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಭೂ ನ್ಯಾಯ ಮಂಡಳಿ ಮುಂದೆ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಪೂರ್ಣ ಮಾಹಿತಿ ನೀಡುವುದು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಭೂ ನ್ಯಾಯಮಂಡಳಿ ಮುಂದೆ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಸರ್ಕಾರವು ಭೂ ನ್ಯಾಯ ಮಂಡಳಿಗಳನ್ನು ಸ್ಥಾಪಿಸಿರುವ ಉದ್ದೇಶ ಈಡೇರಿದೆಯೇ; ಇದರಿಂದ ರೈತರಿಗೆ ನ್ಯಾಯ ದೊರಕಿದೆಯೇ; ರೈತರ ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು ಕಾಲ-ಕಾಲದಲ್ಲಿ ಬಗೆಹರಿದಿವೆಯೇ; | ಭೂ ನ್ಯಾಯ ಮಂಡಳಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಇರಲು ಈ ಕೆಳಗಿನ ಅಂಶಗಳು ಕಾರಣವಾಗಿರುತ್ತವೆ:-<br><br>1. ಭೂ ನ್ಯಾಯಮಂಡಳಿಯಲ್ಲಿ ಅರ್ಜಿಗಳು ಇತ್ಯರ್ಥವಾಗಿ, ಆದೇಶವಾದ ನಂತರ ಸದರಿ ಆದೇಶದಿಂದ ಬಾಧಿತರಾದ ಅಂದರೆ ಗೇಣಿದಾರರು/ ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುತ್ತಾರೆ. ತದನಂತರ ಮಾನ್ಯ ನ್ಯಾಯಾಲಯವು ಭೂ ನ್ಯಾಯಮಂಡಳಿಯ ಮರುವಿಚಾರಣೆಗೆ ಪ್ರಕರಣವನ್ನು ಹಿಂದಿರುಗಿಸಲಾಗುತ್ತಿದೆ. ಇದರಿಂದ ಪ್ರಕರಣ ಬಾಕಿ ಇರಲು ಕಾರಣವಾಗಿರುತ್ತದೆ.<br><br>2. ಗೇಣಿದಾರರು/ ವಾರಸುದಾರರು ಪೌತಿಯಾಗಿ ಸಕಾಲದಲ್ಲಿ ಅವರ ವಾರಸುದಾರರು ವಿಚಾರಣೆಗೆ ಹಾಜರಾಗದಿರುವುದು.<br><br>3. ಗೇಣಿದಾರರು/ ಭೂಮಾಲೀಕರು ಸಾಕ್ಷಿಗಳ ಹೇಳಿಕೆ/ ಪಾರ್ಟಿ ಸವಾಲು ದಾಖಲಾತಿಗಳ ಸಲ್ಲಿಕೆಯಾಗುವಲ್ಲಿ ಕಾಲಾವಕಾಶ ಕೋರುತ್ತಿರುವುದು. |
| ಇ) | ದಶಕಗಳೇ ಕಳೆದರೂ ಭೂ ನ್ಯಾಯ ಮಂಡಳಿಯಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳು ಇತ್ಯರ್ಥವಾಗದೆ ಬಾಕಿ ಇರಲು ಕಾರಣವೇನು; ಬಹುತೇಕ ಜನರು ಸಿವಿಲ್ ಕೋರ್ಟ್ ಮೊರೆ ಹೋಗಿ ಹೈರಾಣಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | |

**ಸಂಖ್ಯೆ: ಕಂಇ 6 ಎಲ್‌ಆರ್‌ಎಸ್ 2024 (ಇ)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

**ಭೂ ನ್ಯಾಯಮಂಡಳಿ ಮುಂದೆ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ವಿವರ**
**ಅನುಬಂಧ-1**

| ಕ್ರ.ಸಂ | ಜಿಲ್ಲೆಯ ಹೆಸರು | ಬಾಕಿ ಪ್ರಕರಣಗಳ ಸಂಖ್ಯೆ |
|---|---|---|
| **1** | **2** | **3** |
| 1 | ಬೆಂಗಳೂರು ನಗರ | 255 |
| 2 | ಬೆಂಗಳೂರು ಗ್ರಾಮಾಂತರ | 48 |
| 3 | ರಾಮನಗರ | 294 |
| 4 | ಕೋಲಾರ | 144 |
| 5 | ಚಿಕ್ಕಬಳ್ಳಾಪುರ | 86 |
| 6 | ತುಮಕೂರು | 48 |
| 7 | ಚಿತ್ರದುರ್ಗ | 04 |
| 8 | ದಾವಣಗೆರೆ | 20 |
| 9 | ಶಿವಮೊಗ್ಗ | 328 |
| 10 | ಚಾಮರಾಜನಗರ | 23 |
| 11 | ಚಿಕ್ಕಮಗಳೂರು | 10 |
| 12 | ದಕ್ಷಿಣ ಕನ್ನಡ ಜಿಲ್ಲೆ | 395 |
| 13 | ಹಾಸನ | 04 |
| 14 | ಕೊಡಗು | 56 |
| 15 | ಮಂಡ್ಯ | 87 |
| 16 | ಮೈಸೂರು | 56 |
| 17 | ಉಡುಪಿ | 8021 |
| 18 | ಬೆಳಗಾವಿ | 383 |
| 19 | ವಿಜಯಪುರ | 78 |
| 20 | ಬಾಗಲಕೋಟ | 35 |
| 21 | ಧಾರವಾಡ | 111 |
| 22 | ಗದಗ | 31 |
| 23 | ಹಾವೇರಿ | 128 |
| 24 | ಉತ್ತರಕನ್ನಡ ಜಿಲ್ಲೆ | 142 |
| 25 | ರಾಯಚೂರು | 42 |
| 26 | ಬೀದರ್ | 209 |
| 27 | ಕೊಪ್ಪಳ | 46 |
| 28 | ಯಾದಗಿರಿ | 33 |
| 29 | ಬಳ್ಳಾರಿ | 00 |
| 30 | ವಿಜಯನಗರ | 48 |
| 31 | ಕಲಬುರಗಿ | 142 |
| | **ಒಟ್ಟು** | **11307** |